(ಆ) ಹಾಗಿದ್ದಲ್ಲಿ, ಯೋಜನೆಗಳ ಹೆಸರುಗಳೇನು ಹಾಗೂ ಪ್ರತಿಯೊಂದು ಯಾತ ನೀರಾವರಿಯಿಂದ ನೀರಾವರಿಯಾಗುತ್ತಿರುವ ಪ್ರದೇಶದ ವಿಸ್ತೀರ್ಣವೆಷ್ಟು ;

(ಇ) ಮುಳಿವಾಡ ಏತ ನೀರಾವರಿ ಯೋಜನೆ ಬಿಜಾಪುರ, ಬಾಗೇವಾಡಿ ಹಾಗೂ ಸಿಂದ್ಗಿ ತಾಲ್ಲೂಕುಗಳ ಪ್ರದೇಶಗಳಿಗೆ ಪ್ರಯೋಜನಕಾರಿಯಾಗುವುದೆ ಹಾಗೂ ಹುನಗುಂದ ತಾಲೂಕಿನ ಹಿನ್ನೀರಿನ ಏತ ನೀರಾವರಿ ಯೋಜನೆಯೂ ಒಳಗೊಂಡಿರುವುದೆ ; ಹಾಗಿಲ್ಲದಿದ್ದಲ್ಲಿ, ಭೂಮಿ ಹಾಗೂ ಮನೆಗಳನ್ನು ಕಳೆದುಕೊಂಡ ಬಿಜಾಪುರದ ಜನತೆಗೆ ಸಹಾಯನೀಡಲು ಸರ್ಕಾರದವರು ಪರಿಶೀಲಿಸುವರೆ ;

(ಈ) ಬಿಜಾಪುರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮುಳವಾಡ ಏತ ನೀರಾವರಿ ಯೋಜನೆಗೆ ಬಹಳ ಒತ್ತಾಯಿಸುತ್ತಿರುವುದು ಸರ್ಕಾರದವರಿಗೆ ತಿಳಿದಿರುವುದೆ ;

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಚುಕ್ಕಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಕೊಡಲಾದ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಪಂಡಿಸಿದ್ದೇನೆ.

ವನಮಹೋತ್ಸವದ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ

೨೨೨ ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಈ ಸಲ ವನಮಹೋತ್ಸವ ಅಂಗವಾಗಿ ಸರಕಾರದವರು ರಾಜ್ಯದಲ್ಲಿ ಕೈಗೊಂಡ ಕ್ರಮಗಳೇನು ?

ಆ) ಈ ಕಾರ್ಯಕ್ರಮಕ್ಕೆ ಸರಕಾರದವರಿಗೆ ತಗಲಿರುವ ವೆಚ್ಚವೆಷ್ಟು ?

ಇ) ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸರಕಾರದವರು ಮಾಡಿದ ಪ್ರಯತ್ನಗಳೇನು ?

ಈ) ವನಮಹೋತ್ಸವದ ಅಂಗವಾಗಿ ಬೆಂಗಳೂರು ನಗರದಲ್ಲಿ ಸರಕಾರದವರು ಹಾಕಿಕೊಂಡ ಕಾರ್ಯಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದವರು ಸಂತ್ಕೊಲೆ ನಂ. ಎಫ್.ಎಫ್.ಡಿ. ೧೪೪ ಎಸ್.ಟಿ.ಎಸ್. ೮೩ ದಿನಾಂಕ ೨೪-೬-೮೩ ರಂತೆ ರಾಜ್ಯದಲ್ಲಿ ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ವನ ಮಹೋತ್ಸವ ಸಪ್ತಾಹವನ್ನು ಆಚರಿಸಲು ಸುತ್ಕೊಲೆ ಕೊಟ್ಟಿರುತ್ತಾರೆ. ಇದನ್ವಯ ರಾಜ್ಯದ ಎಲ್ಲಾ ಕಡೆ ವಿವಿಧ ಹಂತಗಳಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ, ನಗರ ಮಟ್ಟ ಆಯಾಮಿತ ಉತ್ಸಾಹದಿಂದ ಆಚರಿಸಲು ಬೃಹತ್ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ರೂ. ೫,೭೦,೨೧೦-೫೫ ಪೈ.

ಇ) ರಾಜ್ಯಾದ್ಯಂತ ಹೆಚ್ಚು ಮರ ನೆಡುವ ಕಾರ್ಯಕ್ರಮಗಳನ್ನು ಎಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿಯವರು ದಿನಾಂಕ ೪-೭-೮೩ ರಿಂದ ೧೦-೭-೮೩ ರವರೆಗೆ ಕೈಗೊಂಡಿದ್ದಾರೆ ಹಾಗೂ ಇತರ ದಿನಗಳಲ್ಲಿ ಸ್ಥಳೀಯವಾಗಿ ಮಳೆ ಆಧಾರಿಸಿ ಮರ ನೆಡುವ ಕಾರ್ಯಕ್ರಮವನ್ನು ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ರಾಲಿ, ಕಾಲೇಜುಗಳು, ಸಾರ್ವಜನಿಕ ಸಂಸ್ಥೆಗಳು, ಸಾರ್ವಜನಿಕ ಕೈಗಾರಿಕೆಗಳು ಸ್ವಯಂ ಸೇವಾ ಸಂಸ್ಥೆಗಳವರು ಭಾಗವಹಿಸಿದ್ದಾರೆ. ಮರ ನೆಡುವ ಕಾರ್ಯಕ್ರಮದಲ್ಲಿ ಮಂತ್ರಿಗಳು, ಶಾಸಕರು, ಲೋಕಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಸದಸ್ಯರು ಮತ್ತು ಪಂಚಾಯಿತಿ ಸದಸ್ಯರನ್ನೊಳಗೊಂಡು ಸಂಭ್ರಮವಾಗಿ ವನಮಹೋತ್ಸವವನ್ನು ಆಚರಿಸಲಾಗಿದೆ. ಇದೂ ಅಲ್ಲದೆ

ಮರ ನೆಡುವುದರ ಬಗ್ಗೆ ಹೆಚ್ಚಿನ ಜಾಹಿರಾತನ್ನು ರಾಜ್ಯದ ವರ್ತಮಾನ ಪತ್ರಿಕೆಗಳು, ಸ್ಥಳೀಯ ಪತ್ರಿಕೆಗಳು, ಕರ ಪತ್ರಗಳು, ಸಿನೇಮಾ ಸ್ಲೈಡ್‌ಗಳು, ಆಂಟು ಚೀಟಿಗಳು, ಪುಸ್ತಕದ ಲೇಬಲ್‌ಗಳು ಹಾಗೂ ಆಕಾಶವಾಣಿಯ ಮೂಲಕವೂ ಮತ್ತು ಸೆಮಿನಾರ್‌ಗಳನ್ನು ಮಾಡಿ ಜನರಲ್ಲಿ ಹೆಚ್ಚಿನ ಜಾಗೃತಿ ಮಾಡಿಸಲಾಗಿದೆ.

ಈ ಕಾರ್ಯಕ್ರಮದನ್ವಯ ಸಸಿಗಳನ್ನು ವಿತರಿಸಿದುದು ಈ ಕೆಳಗಿನಂತಿದೆ :

೧.	ಶಿವಮೊಗ್ಗ ವೃತ್ತ	...	೪೨,೩೮,೫೯೯
೨.	ಬೆಳಗಾಂ ವೃತ್ತ	...	೨,೮೯,೬೪,೦೦೦
೩.	ಕೊಡಗು ವೃತ್ತ	...	೧೩,೩೬,೬೦೧
೪.	ಕೆನರಾ ವೃತ್ತ	...	೨೩,೨೭,೨೫೪
೫.	ಮೈಸೂರು ವೃತ್ತ	...	೧,೨೫,೧೧,೦೦೨
೬.	ಬಳ್ಳಾರಿ ವೃತ್ತ	...	೧,೦೭,೦೦,೦೦೦
೭.	ಬೆಂಗಳೂರು ವೃತ್ತ	...	೩೦,೮೮,೦೦೦
	ಒಟ್ಟು :		೬,೩೧,೫೪,೪೫೪

ರಾಜ್ಯದ ರಾಜ್ಯಪಾಲರಾದ ಮಾನ್ಯ ಶ್ರೀ ಎ. ಎಸ್. ಬ್ಯಾನರ್ಜಿಯವರು ದಿನಾಂಕ ೪-೭-೮೩ ರಂದು ಹೆಬ್ಬಾಳದಲ್ಲಿ ವನಮಹೋತ್ಸವ ಸಪ್ತಾಹವನ್ನು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿದ್ಯಾಮಂತ್ರಿಗಳು, ಉನ್ನತ ಅಧಿಕಾರಿಗಳು ಹಾಗೂ ಸಾರ್ವಜನಿಕರು ಶಾಲಾ, ಕಾಲೇಜಿನ ಹುಡುಗರು ಭಾಗವಹಿಸಿದ್ದರು ವಿವಿಧ ಜಾತಿಯ ಸಸಿಗಳನ್ನು ನೆಡಲಾಯಿತು. ಮತ್ತು ಹಂಚಲಾಯಿತು. ಶಾಲಾ ಬಾಲಕರಿಗೆ ಬಣ ದ ಪುಸ್ತಕಕ್ಕೆ ಅಂಟಿಸುವ ಲೇಬಲ್‌ಗಳನ್ನೂ ಹಂಚಲಾಯಿತು.

ವನಮಹೋತ್ಸವ ಸಪ್ತಾಹದ ಜೊತೆಗೆ ನಗರದ ನಾನಾ ಕಡೆಗಳಲ್ಲಿ ಉಚಿತ ಸಸಿಗಳನ್ನು ಹಂಚಲು ವ್ಯವಸ್ಥೆಮಾಡಿ, ಸಾರ್ವಜನಿಕರಿಗೆ ಹಂಚಲಾಯಿತು. ಮೇಲಾಗಿ ಆಕಾಶವಾಣಿ ಮತ್ತು ವರ್ತಮಾನ ಪತ್ರಿಕೆಗಳ ಮೂಲಕ ಹೆಚ್ಚಿನ ತಿಳುವಳಿಕೆಯನ್ನು ಪರಿಸರದ ಬಗ್ಗೆ ನೀಡಲಾಯಿತು. ರಸ್ತೆ ಪಾಲು ಮರಗಳ ನೆಡುವಿಕೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ನಗರ ಕಾರ್ಪೋರೇಷನ್ ಸಹಯೋಗದೊಂದಿಗೆ ಮಾಡಲಾಯಿತು. ಶಿಕ್ಷಣ ಕೇಂದ್ರ ಹಾಗೂ ಸಾರ್ವಜನಿಕ ಸಂಸ್ಥೆಗಳ ನಿವೇಶನಗಳಲ್ಲಿ ಮರಗಳನ್ನು ನೆಡಲಾಯಿತು. ಅರಣ್ಯ ಇಲಾಖೆಯವರು ಕೋರಮಂಗಲ ಮತ್ತು ಇಂದಿರಾನಗರ ಬಡಾವಣೆಗಳಲ್ಲಿ ಮರ ನೆಡುವುದನ್ನು ನೋಡಿಕೊಳ್ಳಲಾಗಿದೆ. ಅನೇಕ ಸಂಸ್ಥೆಗಳು, ಶಾಲೆಗಳು, ಕಾಲೇಜುಗಳಿಗೆ ಮರಗಳ ಸಸಿಗಳನ್ನು ಒದಗಿಸಲಾಯಿತು. ಹಾಗೂ, ಗಿಡ ನೆಡುವುದರ ಬಗ್ಗೆ ಹೆಚ್ಚಿನ ತಾಂತ್ರಿಕ ನೆರವನ್ನು ನೀಡಲಾಯಿತು.

ಬೆಂಗಳೂರು ನಗರದಲ್ಲಿ ಒಟ್ಟು ನೆಟ್ಟ ಸಸಿಗಳು ಹಾಗೂ ಮುಫತ್ತಾಗಿ ಹಂಚಿದ ಸಸಿಗಳ ವಿವರ ಈ ರೀತಿ ಇದೆ :

ಅ)	ಬೆಂಗಳೂರು ನಗರದಲ್ಲಿ ಇಲಾಖೆಯವರು ನೆಟ್ಟ ಸಸಿಗಳು	೨೫,೯೬೮	ಮೇಲಿನ ಕೆಲಸಗಳು ಮುಂದು ವರಿಯ ಲ್ಪಟ್ಟಿದೆ.
ಆ)	ಸಾರ್ವಜನಿಕರು ಹಾಗೂ ಇತರ ಸಂಸ್ಥೆಗಳವರಿಗೆ ಮುಫತ್ತಾಗಿ ಹಂಚಿದ ಸಸಿಗಳು.	೨,೨೬,೪೦೦	